VK
ವಿಜಯ ಕರ್ನಾಟಕ
14.04.2016

# 'ಕರ್ನಾಟಕ ಮಾದರಿ' ಇಂದು ದೇಶಾರ್ಪಣೆ

**ಬೆಂಗಳೂರು:** ಎಪಿಎಂಸಿ ಮಾರುಕಟ್ಟೆಗಳಲ್ಲಿ ದಲಾಳರು, ರಿಂಗ್ ಮಾಸ್ಟರ್‌ಗಳ ಹಿಡಿತ ತಪ್ಪಿಸಿ, ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ಕೊಡಿಸುವಲ್ಲಿ ಯಶಸ್ವಿಯಾಗಿರುವ ಕರ್ನಾಟಕದ ಮಾದರಿ ಗುರುವಾರ ಇಡೀ ದೇಶದ ನಾನಾ ರಾಜ್ಯಗಳಲ್ಲಿ ಜಾರಿಯಾಗಲಿದೆ.

ಡಾ.ಅಂಬೇಡ್ಕರ್ ಜಯಂತಿಯಂದು ಹರ್ಯಾಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ವರ್ಷಗಳಲ್ಲಿ ದೇಶದ 585 ಎಪಿಎಂಸಿಗಳಲ್ಲಿ ಆನ್‌ಲೈನ್ ಟ್ರೇಡಿಂಗ್ ಪದ್ಧತಿಯನ್ನು ಅನುಷ್ಠಾನಗೊಳಿಸುವ ಮಹತ್ವದ ಯೋಜನೆ ನ್ಯಾಷನಲ್ ಅಗ್ರಿಕಲ್ಚರಲ್ ಮಾರ್ಕೆಟ್ (ನ್ಯಾಮ್)ಗೆ ಚಾಲನೆ ನೀಡಲಿದ್ದಾರೆ. ಮೊದಲ ಹಂತದಲ್ಲಿ ಗುಜರಾತ್, ತೆಲಂಗಾಣ, ರಾಜಸ್ಥಾನ, ಮಧ್ಯಪ್ರದೇಶ, ಉತ್ತರ ಪ್ರದೇಶ, ಹರ್ಯಾಣ, ಜಾರ್ಖಂಡ್, ಹಿಮಾಚಲ ಪ್ರದೇಶದಲ್ಲಿ ಕೇಂದ್ರದ ನೆರವಿನಲ್ಲಿ ಈ ಯೋಜನೆ ಚಾಲೂ ಆಗಲಿದೆ. ದೇಶದ ಅತಿ ದೊಡ್ಡ ಮಂಡಿಗಳೆಂದೇ ಹೆಸರಾದ ದಿಲ್ಲಿಯ ಆಜಾದ್‌ಪುರ್ ಹಾಗೂ ಮುಂಬಯಿನ ವಾಸಿಯಲ್ಲಿಯೂ ಇದು ಅನುಷ್ಠಾನವಾಗಲಿದೆ.

**ಕರ್ನಾಟಕದ ಮಾದರಿ:** 2014ರಲ್ಲಿ ಕರ್ನಾಟಕ ಸರಕಾರ ಎಪಿಎಂಸಿಗಳಲ್ಲಿ ರೈತರಿಗೆ ಆಗುತ್ತಿರುವ ಮೋಸ ತಪ್ಪಿಸಿ, ಸ್ಪರ್ಧಾತ್ಮಕ ಹಾಗೂ ಲಾಭದಾಯಕ ಬೆಲೆ ಕೊಡಿಸಬೇಕು ಎಂಬ ಆಶಯದಿಂದಾಗಿ ರಾಷ್ಟ್ರೀಯ ಇ ಮಾರ್ಕೆಟಿಂಗ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್ ಎಂಬ ಸರಕಾರಿ ಸಂಸ್ಥೆಯನ್ನು ಹುಟ್ಟು ಹಾಕಿತ್ತು. ಕರ್ನಾಟಕದಲ್ಲಿ ಯಶಸ್ವಿಯಾದ ಮಾದರಿಯನ್ನು ಆಂಧ್ರಪ್ರದೇಶ ಅನುಷ್ಠಾನ ಮಾಡಿದೆ. 26 ರಾಜ್ಯಗಳ ಸಹಕಾರ ಇಲಾಖೆ, ಕೃಷಿ ಮಾರಾಟ ಇಲಾಖೆ ಅಧಿಕಾರಿಗಳು ಕರ್ನಾಟಕಕ್ಕೆ ಭೇಟಿ ನೀಡಿ ಅಧ್ಯಯನ ನಡೆಸಿದ್ದಾರೆ. ಏತನ್ಮಧ್ಯೆ, ಪ್ರಧಾನಿ ನರೇಂದ್ರ ಮೋದಿ ಅವರು ಇಡೀ ದೇಶಕ್ಕೆ ಅನ್ವಯಿಸುವಂತೆ ಹೊಸ ಕಾರ್ಯಕ್ರಮ ರೂಪಿಸಿದ್ದು, ಚಾಲನೆ ನೀಡಲಿದ್ದಾರೆ.